10–06–2006 ರವರೆಗೆ ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿಯಲ್ಲಿ ಐ ಎಸ್ ಐ ಎಸ್ ಟಿ ತರಬೇತಿಯನ್ನು ಗುಪ್ತಚರ ಇಲಾಖೆಯ ಹಾಗೂ ಇತರ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ

3) ಈಗಾಗಲೇ ಗುಪ್ತಚರ ವಿಭಾಗವನ್ನು ಚುರುಕುಗೊಳಿಸಲು ಹಾಗೂ ಅದರ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ ಸರ್ಕಾರವು ಹೆಚ್ಚುವರಿಯಾಗಿ ಗುಪ್ತಚರ ಇಲಾಖೆಗೆ 1 ಎಸ್ ಪಿ, 2 ಡಿ ಎಸ್ ಪಿ, 3 ಪಿ ಐ, 5 ಪಿ ಎಸ್ ಐ, 243 ಪಿ ಸಿ, 6 ಮಹಿಳಾ ಪಿ ಸಿ, 27 ಎ ಪಿ ಸಿ ಚಾಲಕ ಹುದ್ದೆಗಳನ್ನು ಮಂಜೂರು ಮಾಡಿರುತ್ತದೆ

4) ಸಬ್ಸಿಡಿಯರಿ ಮಲ್ಟಿ ಏಜೆನ್ಸಿ ಸೆಂಟರ್ (ಎಸ್ ಎಂ ಎ ಸಿ) ಅನ್ನು ರಾಜ್ಯದಲ್ಲಿ ಎಸ್ ಐ ಬಿ ಸಂಘಟನೆಯೊಂದಿಗೆ ಸ್ಥಾಪಿಸಲಾಗಿದೆ ದಿನಾಂಕ 23–08–2006 ರಿಂದ ಮತ್ತು ದಿನಾಂಕ 13–12–2006 ರಂದು ಸಮನ್ವಯ ಸಭೆಯನ್ನು ನಡೆಸಿ, ಭಯೋತ್ಪಾದನೆಯ ಕುರಿತಂತೆ ಚರ್ಚೆ ನಡೆಸಲಾಗಿದೆ

5) ಕರಾವಳಿ ತೀರದ ಮೂಲಕ ನುಸುಳಬಹುದಾದ ಉಗ್ರರ ಬಗ್ಗೆ ಹಾಗೂ ಇನ್ನಿತರ ಚಟುವಟಿಕೆ ಕುರಿತಂತೆ ತೀವ್ರ ನಿಗಾ ಕೈಗೊಳ್ಳಲಾಗಿದೆ

6) ಗುಪ್ತಚರ ಇಲಾಖೆಯು ಆಧುನಿಕ ತಾಂತ್ರಿಕ ಉಪಕರಣಗಳನ್ನು ಹೊಂದಿದ್ದು, ಇವುಗಳ ಬಳಕೆಯಿಂದ ಉಗ್ರಗಾಮಿಗಳ ಚಲನವಲನಗಳ ಮೇಲೆ ನಿಗಾವಹಿಸಿ ಕ್ರಮವನ್ನು ಕೈಗೊಳ್ಳಲಾಗಿದೆ

1430 (1498) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು) – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹತ್ತು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದ (ಸೂಪರ್‌ನ್ಯೂಮರರಿ ಹುದ್ದೆ) ನೌಕರರನ್ನು ಖಾಯಂ ಗೊಳಿಸುವುದು ನಿಜವೇ,

ಆ) ವಿವಿಧ ಇಲಾಖೆಗಳ ದ್ವಿತೀಯ ದರ್ಜೆ ಹುದ್ದೆಯಿಂದ ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಬಡ್ತಿ ನೀಡಿರುವುದು ಸರಿಯೇ, ಯಾವ ರೀತಿಯಲ್ಲಿ ಬಡ್ತಿ ನೀಡಲಾಗಿದೆ,

ಇ) ಸರ್ಕಾರದಿಂದ ಬಡ್ತಿ ನೀಡಿದ ನೌಕರರು ಒಬ್ಬ ವ್ಯಕ್ತಿಗೆ 1 50 ಲಕ್ಷದಿಂದ 2 00 ಲಕ್ಷದವರೆಗೆ ಬಾಕಿ ಹಣ ಪಡೆದಿರುವುದು ನಿಜವೇ, ಇದರಿಂದ ಸರ್ಕಾರಕ್ಕೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಹೆಚ್ ಡಿ ಕುಮಾರ್‌ಸ್ವಾಮಿ (ಮುಖ್ಯಮಂತ್ರಿ)

ಅ) ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 2 ಎಸ್‌ಎಲ್‌ಸಿ 90 ದಿನಾಂಕ 6 8 90ರ ಪ್ರಕಾರ ದಿನಗೂಲಿ ನೌಕರರ ಸೇವೆಯನ್ನು ಸಕ್ರಮಗೊಳಿಸುವಾಗ ಖಾಲಿ ಹುದ್ದೆಗಳು ಲಭ್ಯವಿಲ್ಲದ ಪ್ರಕರಣದಲ್ಲಿ ಸೂಪರ್‌ನ್ಯೂಮರರಿ ಹುದ್ದೆಯನ್ನು ಸೃಜಿಸಿ ಸೇವೆಯಲ್ಲಿ ಸಕ್ರಮಗೊಳಿಸಲಾಗಿದೆ

ಆ) ಸೂಪರ್‌ನ್ಯೂಮರರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಬಡ್ತಿಗೆ ಅರ್ಹರಿರುವುದಿಲ್ಲ

ಇ) 'ಆ' ಪ್ರಶ್ನೆಗೆ ನೀಡಿದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ

1431 (1885) ಶ್ರೀ ಭರಮಗೌಡ (ರಾಜು) ಆಲಗೌಡ ಕಾಗೆ (ಕಾಗವಾಡ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಗವಾಡ ಮತ ಕ್ಷೇತ್ರದಲ್ಲಿ ಎರಡು ವರ್ಷಗಳಿಂದ ಮಹಾಪೂರದಿಂದ ಅಲ್ಲಿನ ರಸ್ತೆಗಳು ಹದಗೆಟ್ಟಿದ್ದು, ರಸ್ತೆಗಳ ದುರಸ್ತಿಗಾಗಿ ಎಷ್ಟು ಹಣ ನೀಡಲಾಗಿದೆ,

ಆ) ಕಾಗವಾಡ ಮತಕ್ಷೇತ್ರ ವ್ಯಾಪ್ತಿಯಲ್ಲಿ ಮೂರು ಸಕ್ಕರೆ ಕಾರ್ಖಾನೆಗಳಿದ್ದು, ಈ ರಸ್ತೆ ಹದಗೆಟ್ಟಿರುವುದರಿಂದ ಕಬ್ಬು ಸಾಗಾಣಿಕೆಗೆ ರೈತರಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಹಾಗಿದ್ದಲ್ಲಿ, ಸದರಿ ರಸ್ತೆ ದುರಸ್ತಿಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?